7.50 ಪಿ.ಎಂ

ಜನಪ್ರತಿನಿಧಿಗಳಾಗಿ ನಾವಿಲ್ಲಿ ಬಂದಾಗ ನಾವು ಇಲ್ಲಿ ಯಾವ ರೀತಿಯಲ್ಲಿ ನಡೆದುಕೊಳ್ಳುತ್ತೇವೆ, ನಮ್ಮ ನಡವಳಿಕೆ ಇಲ್ಲಿ ಯಾವ ರೀತಿ ಇದೆಯೆಂಬುದನ್ನು ಹೊರಗೆ ಜನರು ಗಮನಿಸುತ್ತಿರುತ್ತಾರೆ. ವಿವೇಚನೆಯ ಬಗ್ಗೆ ಪ್ರತಿಯೊಂದು ಸಲವೂ ಹೇಳುತ್ತೇನೆ. I would insist on this and say that man is a rational being and he is bound to be social being. With all your differences, you shall never bring disreputation to this title that is conferred on me. Man is a creation of the evolution. That is the difference between the animal and the man. If our conduct ultimately reflects amounting to an inference that we are less of a rational, I do not think, we become good representatives of the people.

Lastly, I do not wish to say anything further. I would only expect all the hon. Members of this August House to bear this in mind. ಮಾನ್ಯ ಸದಸ್ಯರುಗಳಾದ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ, ವಾಟಾಳ ನಾಗರಾಜ್, ಬಿ.ಎಸ್. ಯಡಿಯೂರಪ್ಪ ಹಾಗೂ ಇನ್ನಿತರ ಸದಸ್ಯರುಗಳು ಭಾರತದ ಶ್ರೇಷ್ಠ ನ್ಯಾಯಾಲಯ, ನ್ಯಾಯಾಲಯದ ನಿಂದನೆಯ ಪ್ರಕರಣದಲ್ಲಿ ರಾಜ್ಯದ ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿಯವರಿಗೆ ಕಾರಾಗೃಹವಾಸವನ್ನು ವಿಧಿಸಿರುವ ಹಿನ್ನೆಲೆಯಲ್ಲಿ ರಾಜ್ಯದ ಆಡಳಿತ ಕ್ಷೇತ್ರದಲ್ಲಿ ಉಂಟಾಗಿರುವ ಆತಂಕ ಮತ್ತು ಭಯಾನಕ ಪರಿಸ್ಥಿತಿಯ ಬಗ್ಗೆ ನಿಲುವಳಿ ಸೂಚನೆಯನ್ನು ನೀಡಿದ್ದು, ಆ ಬಗ್ಗೆ ಅವರುಗಳ ಪ್ರಾಸ್ತಾವಿಕ ವಿವರಣೆ ಮತ್ತು ಮಾನ್ಯ ಮುಖ್ಯಮಂತ್ರಿಯವರು ನೀಡಿರುವ ವಿವರವಾದ ಉತ್ತರವನ್ನು ನಾನು ಕೇಳಿದ್ದೇನೆ. ನಾನು ಈ ನಿಲುವಳಿ ಸೂಚನೆಗೆ ನನ್ನ ಅನುಮತಿಯನ್ನು ನಿರಾಕರಿಸಿದ್ದೇನೆ.

ವಿತ್ತೀಯ ಕಾರ್ಯಕಲಾಪಗಳು

ಅಧ್ಯಕ್ಷರು: 1995-96ನೇ ಸಾಲಿನ ಈ ಕೆಳಕಂಡ ಬೇಡಿಕೆಗಳ ಮೇಲೆ ಚರ್ಚೆ ಮತ್ತು ಮತಕ್ಕೆ ಹಾಕುವುದು. ಮೊದಲು ಬೇಡಿಕೆಯನ್ನು ಮಂಡಿಸುವುದು.

ಅನುದಾನ ಬೇಡಿಕೆಗಳು 1995-96

ಬೇಡಿಕೆಯ ಸಂಖ್ಯೆ: 30-ಗೃಹ ನಿರ್ಮಾಣ (ಸರ್ಕಾರಿ ನಿವಾಸದ ಕಟ್ಟಡಗಳ ಹೊರತು)

ಶ್ರೀ ಬಸವರಾಜ ರಾಯರೆಡ್ಡಿ (ವಸತಿ ಸಚಿವರು) : ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1996 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ," ಗೃಹ ನಿರ್ಮಾಣ" (ಸರ್ಕಾರಿ ನಿವಾಸದ ಕಟ್ಟಡಗಳ ಹೊರತು)ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 51,49,26,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು

ಬಂಡವಾಳ ಖಾತೆಯಲ್ಲಿ 38,93,84,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ರೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾಪವನ್ನು ಮಂಡಿಸಲಾಯಿತು

ಬೇಡಿಕೆ ಸಂಖ್ಯೆ: 31-ನಗರಾಭಿವೃದ್ಧಿ (ಬೆಂಗಳೂರು ಅಭಿವೃದ್ಧಿ ಯೋಜನೆಗಳು ಮತ್ತು ನಗರ ಮೂಲ ಸೌಕರ್ಯ ವ್ಯವಸ್ಥೆ ಅಭಿವೃದ್ಧಿ ನಿಗಮವನ್ನು ಹೊರತುಪಡಿಸಿ)

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1996ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ " ನಗರಾಭಿವೃದ್ಧಿ" (ಬೆಂಗಳೂರು ಅಭಿವೃದ್ಧಿ ನಿಗಮವನ್ನು ಹೊರತುಪಡಿಸಿ) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 164,15,08,00 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 108, 21,76,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ರೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾಪವನ್ನು ಮಂಡಿಸಲಾಯಿತು.

ಬೇಡಿಕೆಯ ಸಂಖ್ಯೆ : 32 ಬೆಂಗಳೂರು ಅಭಿವೃದ್ಧಿ

ಶ್ರೀ ಹೆಚ್. ಡಿ. ದೇವೇಗೌಡ (ಮುಖ್ಯಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1996ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೆಂಗಳೂರು ಅಭಿವೃದ್ಧಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 11,43,508,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 25,10,00,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ರೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಬೇಡಿಕೆಯ ಸಂಖ್ಯೆ : 34-ಭಾರಿ ಮತ್ತು ಮಧ್ಯಮ ನೀರಾವರಿ

ಶ್ರೀ ಹೆಚ್. ಡಿ. ದೇವೇಗೌಡ (ಮುಖ್ಯಮಂತ್ರಿಯವರು) ಸನ್ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1996 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ " ಭಾರಿ ಮತ್ತು ಮಧ್ಯಮ ನೀರಾವರಿ" ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 397,81,50,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 909,43,46,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ರೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾಪವನ್ನು ಮಂಡಿಸಲಾಯಿತು

ಬೇಡಿಕೆಯ ಸಂಖ್ಯೆ : 54- ಗ್ರಾಮಾಂತರ ನೀರು ಸರಬರಾಜು ಮತ್ತು ನೈರ್ಮಲ್ಯ

ಶ್ರೀ ಎಂ.ಪಿ. ಪ್ರಕಾಶ (ಗಾಮೀಣಾಭಿವೃದ್ಧಿ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1996 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ " ಗ್ರಾಮಾಂತರ ನೀರು ಸರಬರಾಜು ಮತ್ತು ನೈರ್ಮಲ್ಯ" ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 222,11,96,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ರೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಬೇಡಿಕೆಯ ಸಂಖ್ಯೆ : 55- ಗ್ರಾಮೀಣ ಅಭಿವೃದ್ಧಿ

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣ ಅಭಿವೃದ್ಧಿ) : ಸನ್ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1996ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ " ಗ್ರಾಮೀಣ ಅಭಿವೃದ್ಧಿ" ಗಾಗಿ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 577,07,61,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು(ರೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾಪವನ್ನು ಮಂಡಿಸಲಾಯಿತು.

ಬೇಡಿಕೆಯ ಸಂಖ್ಯೆ: 33 - ಸಣ್ಣ ನೀರಾವರಿ

ಶ್ರೀ ಹೆಚ್. ಡಿ. ದೇವೇಗೌಡ (ಮುಖ್ಯಮಂತ್ರಿಯವರು) : ಸನ್ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1996ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ " ಸಣ್ಣ ನೀರಾವರಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 46,58,22,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 62,03,98,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ರೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾಪವನ್ನು ಮಂಡಿಸಲಾಯಿತು

ಬೇಡಿಕೆಯ ಸಂಖ್ಯೆ: 43- ಲೋಕೋಪಯೋಗಿ ಕಾಮಗಾರಿ (ನಿರ್ಮಾಣ ಹೊರತು)

ಶ್ರೀ ಶಿವಾನಂದ ಕೌಜಲಗಿ (ಲೋಕೋಪಯೋಗಿ ಇಲಾಖೆಯ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1996ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ " ಲೋಕೋಪಯೋಗಿ (ಕಾಮಗಾರಿ ನಿರ್ಮಾಣ ಹೊರತು" ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 197,50,62,000 ರೂಪಾಯಿಗಳಿಗಿಂತ

ಮೀರದ ಮೊತ್ತವನ್ನು (ರೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಬೇಡಿಕೆಯ ಸಂಖ್ಯೆ : 44- ಕಟ್ಟಡಗಳು

ಶ್ರೀ ಶಿವಾನಂದಕೌಜಲಗಿ (ಲೋಕೋಪಯೋಗಿ ಇಲಾಖೆಯ ಸಚಿವರು): ಸನ್ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1996ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ " ಕಟ್ಟಡಗಳಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 15,89,01,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 113,14,69,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ರೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಬೇಡಿಕೆಯ ಸಂಖ್ಯೆ: 45 - ರಸ್ತೆಗಳು ಮತ್ತು ಸೇತುವೆಗಳು

ಶ್ರೀ ಶಿವಾನಂದ ಕೌಜಲಗಿ (ಲೋಕೋಪಯೋಗಿ ಇಲಾಖೆಯ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1996ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ " ರಸ್ತೆಗಳು ಮತ್ತು ಸೇತುವೆಗಳಿಗೆ" ಸಂದಾಯ ಮಾಡುವಲ್ಲಿ ಬರತಕ್ಕಂತ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 157,93,29,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 96,71,96,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಪ್ರಸ್ತಾಪವನ್ನು ಮಂಡಿಸಲಾಯಿತು

ಶ್ರೀ ಎಸ್. ಬಂಗಾರಪ್ಪ : ಅಧ್ಯಕ್ಷರೆ, ಈಗಾಗಲೇ ಸಮಯ 7-45 ಆಗಿದೆ. ನಾವು ಇಂದು ಚರ್ಚೆಯನ್ನು ಪ್ರಾರಂಭ ಮಾಡಿಬಿಡೋಣ ಅನಂತರ, ನಾಳೆ ಇಲ್ಲವೆ ಸೋಮವಾರಕ್ಕೆ ಅದನ್ನು ಮುಂದುವರೆಸೋಣವೆಂದು ನನ್ನ ಸಲಹೆ.

ಶ್ರೀ ಹೆಚ್. ಡಿ. ದೇವೇಗೌಡ : ಚರ್ಚೆಯನ್ನು ಪ್ರಾರಂಭ ಮಾಡಿ ಐವತ್ತು ನಿಮಿಷಗಳಾದ ಮೇಲೆ ಸೋಮವಾರಕ್ಕೆ ಚರ್ಚೆಯನ್ನು ಮುಂದೂಡೋಣ.

+ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಸನ್ಮಾನ್ಯ ಅಧ್ಯಕ್ಷರೆ ಸರ್ಕಾರದ ಮಂಡಿಸಿರತಕ್ಕಂಥ ಬೇಡಿಕೆಗಳಲ್ಲಿ ಮೊದಲು ಗೃಹ ನಿರ್ಮಾಣ ಇಲಾಖೆಯ ಬೇಡಿಕೆಯ ಬಗ್ಗೆ ಮಾತನಾಡಲು ಬಯಸುತ್ತೇನೆ. ನಮ್ಮ ದೇಶ ಸ್ವಾತಂತ್ರ್ಯ ಪಡೆದಾಗಿನಿಂದಲೂ, ಮನುಷ್ಯನ ಅತೀ ಮುಖ್ಯವಾದ ಮೂಲಭೂತ ಅವಶ್ಯಕತೆಗಳಲ್ಲಿ ವಾಸ ಮಾಡಲು ಮನೆ ಬೇಕು ಎನ್ನತಕ್ಕದ್ದು ಒಂದು ಬೇಡಿಕೆಯಾಗಿದೆ. ನಾವು ನಿರಂತರವಾಗಿ ಇದರ ಬಗ್ಗೆ ನೋಡಿಕೊಂಡು ಬರುತ್ತಿದ್ದೇವೆ, ನಮ್ಮ ರಾಜ್ಯದ ಮಟ್ಟಿಗೆ ಹೇಳುವುದಾದರೆ ಇವತ್ತಿನವರೆಗೂ ತಾಲ್ಲೂಕು ಮಟ್ಟದಲ್ಲಿನ ವಿವರಣೆಯನ್ನು ತೆಗೆದುಕೊಂಡರೆ ಹಳ್ಳಿಗಾಡಿನಲ್ಲಿ ವಾಸ

ಮಾಡುವ ಸುಮಾರು ನಲವತ್ತರಿಂದ ಐವತ್ತು ಪರಸೆಂಟ್ ಜನರಿಗೆ ಸರಿಯಾದಂಥ ವಾಸದ ಮನೆಗಳನ್ನು ಕೊಡಲು ಸಾಧ್ಯವಾಗುತ್ತಿಲ್ಲ. ಯೋಗ್ಯವಾದಂಥ ಮನೆಗಳನ್ನು ದೊರಕಿಸಲು ಸಾಧ್ಯವಾಗುತ್ತಿಲ್ಲ. ಪಟ್ಟಣ ಪ್ರದೇಶದಲ್ಲಿ ವಾಸ ಮಾಡತಕ್ಕಂಥ ವಸತಿ ಹೀನರ ಸಂಖ್ಯೆಯು ದಿನೇ ದಿನೇ ಬೆಳೆಯುತ್ತಿದೆ. ಊಹೆ ಮಾಡಲು ಸಾಧ್ಯವಾಗದ ಮಟ್ಟದಲ್ಲಿ ಪಟ್ಟಣ ಪ್ರದೇಶಗಳಲ್ಲಿ ನಿವೇಶನದ ಸಮಸ್ಯೆ ವಾಸ ಮಾಡುವ ಮನೆಗಳ ಸಮಸ್ಯೆಯೆಂದು ಬೆಳೆಯುತ್ತಿದೆ.

ಇದು ನಿಜವಾಗಿಯೂ ಗಂಭೀರವಾದಂಥ ಸಮಸ್ಯೆ. ಸ್ವಾತಂತ್ರ್ಯ ಬಂದಾಗಿನಿಂದ ಇಲ್ಲಿಯಾವರೆಗೆ ಸರ್ಕಾರವನ್ನು ನಡೆಸಿಕೊಂಡು ಬಂದಂಥವರು ಅಧಿಕಾರವನ್ನು ನಡೆಸಿಕೊಂಡು ಬಂದಂಥವರು ಸರಿಯಾದ ಯೋಜನೆಗಳನ್ನು ಮಾಡದಿದ್ದ ಕಾರಣ ಈವತ್ತು. ನಾವು ವಸತಿ ಸಮಸ್ಯೆಗಳನ್ನು ರಾಜ್ಯದಲ್ಲಿ ಬೃಹದಾಕಾರವಾಗಿ ಎದುರಿಸಬೇಕಾಗಿದೆ. ಹಿಂದೆ ಇದ್ದಂಥ ಸರ್ಕಾರಗಳು ಹಲವಾರು ಯೋಜನೆಗಳನ್ನು ಹಾಕಿತ್ತು. ಈಗ ಇರುವ ಸರ್ಕಾರವು ಸಹ ಯೋಜನೆಗಳನ್ನು ರೂಪಿಸುತ್ತಿದೆ. ವಸತಿ ಸೌಕರ್ಯವನ್ನು ಕಲ್ಪಿಸಲು ಕ್ರಮ ತೆಗೆದುಕೊಳ್ಳುತ್ತಿದೆ. ವಸತಿ ಸಮಸ್ಯೆಯ ಬಗ್ಗೆ ಸರ್ಕಾರಕ್ಕೆ ಇರಬೇಕಾದಂಥ ಮೂಲಭೂತವಾದ ದೃಷ್ಟಿಯದ್ದು ಇಲ್ಲಿ ಮುಖ್ಯವಾದ ಪ್ರಶ್ನೆಯಾಗಿದೆ. ಆ ದೃಷ್ಟಿ ಯಾವ ರೀತಿಯಲ್ಲಿರಬೇಕೆಂದರೆ, ಹಳ್ಳಿಗಾಡಿನಲ್ಲಿ ನಾನಾ ಕಾರಣಗಳಿಂದ ವಸತಿ ಹೀನರಿದ್ದಾರೆ ಪಟ್ಟಣಗಳಲ್ಲಿ ಹಲವಾರು ಕಾರಣಗಳಿಂದ ವಸತಿ ಇಲ್ಲದಿರತಕ್ಕವರು ಇದ್ದಾರೆ.

ಮೊದಲು ಹಳ್ಳಿಗಾಡಿನ ಪರಿಸ್ಥಿತಿಯನ್ನು ತೆಗೆದುಕೊಂಡರೆ, ಸರ್ಕಾರವು ಒಬ್ಬನು ಗುಡಿಸಲು ಹಾಕಿ ಕೊಂಡಿರುವವನಿಗೂ ಸಹ ಮನೆಯಿದೆಯೆಂದು ಲೆಕ್ಕಕ್ಕೆ ತೆಗೆದುಕೊಳ್ಳುತ್ತಿದೆ. ಸರ್ಕಾರ ಈಗ ಹಳ್ಳಿಗಳಲ್ಲಿ ಯಾರು ನಿವೇಶನ ರಹಿತರು, ಯಾರು ವಸತಿ ರಹಿತರು ಎನ್ನುವ ಬಗ್ಗೆ ಪಟ್ಟಿ ಮಾಡಲು ಅಧಿಕಾರಗಳಿಗೆ ಕೆಲಸವನ್ನು ಒಪ್ಪಿಸಿದ್ದಾರೆ. ಈ ರೀತಿ ವರದಿಯನ್ನು, ಪಟ್ಟಿಯನ್ನು ಮಾಡುವ ಸಮಯದಲ್ಲಿ ನಾನೇ ಸ್ವತಃ ನನ್ನ ಅನುಭವದಿಂದ ಕೆಲವು ವಿಚಾರವನ್ನು ಗ್ರಹಿಸಿದ್ದೇನೆ. ಯಾರು ಹಳ್ಳಿಗಳಲ್ಲಿ ಮನೆಯನ್ನು, ನಿವೇಶನವನ್ನು ಹೊಂದಿಲ್ಲ ಎನ್ನುವ ಬಗ್ಗೆ ವರದಿಯನ್ನು ಮಾಡಲು ಹೋದಂಥ ಅಧಿಕಾರಿಗಳು ಯಾರಿಗಾದರೂ ಒಂದು ಸಣ್ಣ ಗುಡಿಸಲು ಇದ್ದರೆ ಇವನಿಗೂ ಮನೆಯಿದೆಯೆಂದು ಅವನ ಹೆಸರನ್ನು ಬಿಟ್ಟುಬಿಡುತ್ತಾರೆ. ಆ ಮನೆಯಲ್ಲಿ ವಾಸ ಮಾಡಲು ಯೋಗ್ಯವಾಗಿದೆಯೇ ಅಥವಾ ಇಲ್ಲವೋ ಎಂಬುದನ್ನು ನೋಡುವುದಿಲ್ಲ. ಆ ದೃಷ್ಟಿಯಿಂದ ನಾವು ಎಲ್ಲರಿಗೂ ಮನೆಗಳನ್ನು ಕಲ್ಪಿಸಬೇಕಾದಂಥ ಸಂದರ್ಭ ಬಂದಾಗ, ನಾವು ತಪ್ಪು ರೀತಿಯಾದ ವರದಿಯನ್ನು, ಮಾಹಿತಿಯನ್ನು ಪಡೆದಿರುವ ಕಾರಣಕ್ಕಾಗಿ ನಾವು ಸಮಗ್ರವಾದಂಥ ವಸತಿ ಯೋಜನೆಯನ್ನು ರೂಪಿಸಲು ಸಾಧ್ಯವಾಗುವುದಿಲ್ಲ. ಪಟ್ಟಣ ಪ್ರದೇಶದಲ್ಲೂ ಸಹ ಹಾಗೆಯೇ ಆಗಿದೆ. ಪಟ್ಟಣಗಳಲ್ಲಿ ವಸತಿ ಸಮಸ್ಯೆಗಳನ್ನು ಬಗೆಹರಿಸಲು, ಸಮಗ್ರವಾದಂಥ ಯೋಜನೆ ಬೇಕಾಗುತ್ತದೆ. ಪಟ್ಟಣಗಳಲ್ಲಿ, ಇದು ಕೇವಲ ಬೆಂಗಳೂರಿನಲ್ಲಿ ಮಾತ್ರವಲ್ಲ, ಯಾವುದೇ ಪಟ್ಟಣದಲ್ಲಿ ಇವತ್ತು ಏನಾಗುತ್ತಿದೆಯೆಂದರೆ ಹಳ್ಳಿಗಾಡಿನಲ್ಲಿ ಜನರು ವಿಪರೀತವಾಗಿ ವಲಸೆ ಬರುತ್ತಿದ್ದಾರೆ.

ಪಟ್ಟಣಗಳಲ್ಲಿ ವಿಶೇಷವಾದಂಥ ಸಮಸ್ಯೆ ಇದೆ. ಇಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ಹಳ್ಳಿಗಾಡಿನಲ್ಲಿ ಕೂಲಿಯನ್ನು ಕಳೆದುಕೊಂಡಿರುವ ಜನರು, ಹಳ್ಳಿಗಾಡಿನಲ್ಲಿ ಕೆಲಸವಿಲ್ಲದಿರುವ ಜನರು ಜೀವನ ಸಾಗಿಸಲು ಕೆಲಸವನ್ನು ಹುಡುಕಿಕೊಂಡು ಪಟ್ಟಣಗಳಿಗೆ ವಲಸೆ ಬಂದು ಪಟ್ಟಣಗಳಲ್ಲಿ ವಸತಿ ಸೌಕರ್ಯವಿಲ್ಲದೆ ಹಲವಾರು ರೀತಿಯಾದ ಸಮಸ್ಯೆಗಳು ಪಟ್ಟಣದಲ್ಲಿ ಉದ್ಭವಾಗುತ್ತಿರುವುದನ್ನು ನಾವು ಗಮನಿಸುತ್ತಿದ್ದೇವೆ. ಇದನ್ನು ಗಮನದಲ್ಲಿಟ್ಟುಕೊಂಡು ಹಳ್ಳಿಗಾಡಿನಲ್ಲಿ ವಸತಿ ಯೋಜನೆಯು ಯಾವ ರೀತಿಯಲ್ಲಿರಬೇಕು, ಪಟ್ಟಣಗಳಲ್ಲಿ ವಸತಿ ಯೋಜನೆ ಯಾವ ರೀತಿ ಇರಬೇಕು, ವಸತಿ ಸಮಸ್ಯೆಯನ್ನು ಯಾವ ರೀತಿಯಲ್ಲಿ ಪರಿಹಾರ ಮಾಡಬೇಕು ಎನ್ನುವ ಬಗ್ಗೆ ಸಮಗ್ರವಾದಂಥ ಯೋಜನೆಯನ್ನು ಯಾವುದೇ ಸರ್ಕಾರವು ರೂಪಿಸದಿದ್ದರೆ ಖಂಡಿತವಾಗಿ ವಸತಿ ಸಮಸ್ಯೆಯನ್ನು ಪರಿಹಾರ ಮಾಡುಲು ಸಾಧ್ಯವಾಗುವುದಿಲ್ಲ. ಮಾನ್ಯ ಬಂಗಾರಪ್ಪನವರ ಕಾಲದಲ್ಲಿ ಆಶ್ರಯ ಯೋಜನೆ ಎನ್ನತಕ್ಕದ್ದು ಜಾರಿಗೆ ಬಂದಿತ್ತು; ಎಲ್ಲಾ ರೀತಿಯಿಂದಲೂ ಅದು ಒಳ್ಳೆಯ ಯೋಜನೆಯೆಂದು ನಾವುಗಳು ಒಪ್ಪಲೇ ಬೇಕಾಗುತ್ತದೆ.

ಅದೇ ಪರಿಪೂರ್ಣವೆಂದು ನಾನು ಹೇಳುವುದಿಲ್ಲ. ಆದರೆ ಈ ವಸತಿ ಸಮಸ್ಯೆಯನ್ನು ನಿವಾರಿಸಲು ನಿರ್ದಿಷ್ಟವಾದ ಯೋಜನೆ ಬೇಕಾಗುತ್ತದೆ. ಆ ರೀತಿ ಯೋಜನೆಯನ್ನು ಸರ್ಕಾರ ರೂಪಿಸುವ ಬಗ್ಗೆ ನಾನು ಹೇಳುವುದೇನೆಂದರೆ, ವಸತಿ ಸಮಸ್ಯೆಯನ್ನು ಹಳ್ಳಿಗಾಡಿನಲ್ಲಿ ಮತ್ತು ಪಟ್ಟಣಗಳಲ್ಲಿ ವೈಜ್ಞಾನಿಕವಾಗಿ ಅಭ್ಯಾಸ ಮಾಡಬೇಕು. ಮೊದಲು ನಾವು ವಸತಿ ಸಮಸ್ಯೆಯನ್ನು ತಿಳಿದುಕೊಳ್ಳಬೇಕು. ಆ ರೀತಿ ಸಮಸ್ಯೆಯನ್ನು ಸರಿಯಾಗಿ ತಿಳಿಯದೆಯೇ ವಸತಿ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ನಾವು ಯಾವುದೇ ವೈದ್ಯರ ಹತ್ತಿರ ಹೋದರೆ ಮೊದಲು ಆ ವೈದ್ಯ ಮಾಡಬೇಕಾದ ಕೆಲಸವೇನೆಂದರೆ ರೋಗ ಯಾವುದು ಬಂದಿದೆ ಎಂಬುದನ್ನು ಮೊದಲು ಗುರುತಿಸಬೇಕಾಗುತ್ತದೆ.

Doctor has to diagnoise the disease first and then only he will be able to prescribe medicines. Any doctor who fails to diagnoise the disease, he cannot give perfect medicines and he cannot prescribe medicines.

ಅಧ್ಯಕ್ಷರು : ಈಗಾಗಲೇ ಸಮಯವಾಗಿದೆ. ಆದ್ದರಿಂದ ಈಗ ಸದನವನ್ನು ಮುಂದೂಡಿ ಪುನಃ ಸೋಮವಾರ ಬೆಳಿಗ್ಗೆ 11 ಗಂಟೆಗೆ ಸಮಾವೇಶಗೊಳ್ಳುತ್ತಿದೆ.

ಸಭೆಯು ರಾತ್ರಿ 7-58ಕ್ಕೆ ಮುಕ್ತಾಯಗೊಂಡಿತು:

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)